ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	179
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	17-07-2019

ಕ್ರಸಂ	ಪ್ರಶ್ನೆಗಳು	ಉತ್ತರ
1.	ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಚೈಲ್ಡ್ ಲೈನ್ 1098 ಸೇವೆ ಜಾರಿಯಲ್ಲಿದೆ: (ವಿವರ ನೀಡುವುದು)	ರಾಜ್ಯದ 29 ಜಿಲ್ಲೆಗಳಲ್ಲಿ ಚೈಲ್ಡ್‌ಲೈನ್ 1098 ಸೇವೆ ಜಾರಿಯಲ್ಲಿದೆ. (ವಿವರಗಳ ಪಟ್ಟಿ ಲಗತ್ತಿಸಿದೆ)
2.	ಇದನ್ನು ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಈಗಾಗಲೇ 29 ಜಿಲ್ಲೆಗಳಲ್ಲಿ ಚೈಲ್ಡ್ ಲೈನ್ ಸೇವೆಯನ್ನು ಪ್ರಾರಂಭಿಸಲಾಗಿದೆ. ಕೋಲಾರ ಜಿಲ್ಲೆಯಲ್ಲಿ ಮಕ್ಕಳ ಅಭಿವೃದ್ಧಿ/ಮಕ್ಕಳ ಹಕ್ಕುಗಳ ರಕ್ಷಣೆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಅಧ್ಯಯನವನ್ನು ಕೈಗೊಂಡು, ಇದರ ಅಂತಿಮ ವರದಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರಕ್ಕೆ ಚೈಲ್ಡ್ ಲೈನ್ ಇಂಡಿಯಾ ಫೌಂಡೇಷನ್ ಸಂಸ್ಥೆಯು ಸಲ್ಲಿಸಿದ್ದು, ಶೀಘ್ರದಲ್ಲಿಯೇ ಚೈಲ್ಡ್ ಲೈನ್ 1098 ಸೇವೆಯನ್ನು ಕೋಲಾರದಲ್ಲಿ ಪ್ರಾರಂಭಿಸಲು ಆದೇಶವನ್ನು ನಿರೀಕ್ಷಿಸಲಾಗಿದೆ.
3.	ಎಲ್ಲಾ ಜಿಲ್ಲೆಗಳಲ್ಲೂ ಚೈಲ್ಡ್ ಲೈನ್ ಜಿಲ್ಲಾ ಸಲಹಾ ಮಂಡಳಿ ಅಸ್ತಿತ್ವದಲ್ಲಿದೆಯೇ: ಇದ್ದಲ್ಲಿ ಅವುಗಳ ಕಾರ್ಯಗಳೇನು (ವಿವರ ನೀಡುವುದು)	29 ಜಿಲ್ಲೆಗಳ ಪೈಕಿ 27 ಜಿಲ್ಲೆಗಳಲ್ಲಿ ಚೈಲ್ಡ್ ಲೈನ್ ಜಿಲ್ಲಾ ಸಲಹಾ ಮಂಡಳಿ ಅಸ್ತಿತ್ವದಲ್ಲಿದೆ. ಬಾಗಲಕೋಟೆ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಸಲಹಾ ಮಂಡಳಿ ರಚಿಸಲು ಕ್ರಮವಹಿಸಲಾಗುತ್ತಿದೆ. ಮಾನ್ಯ ಜಿಲ್ಲಾಧಿಕಾರಿಗಳು ಚೈಲ್ಡ್ ಲೈನ್ ಜಿಲ್ಲಾ ಸಲಹಾ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಪ್ರತಿ 06 ತಿಂಗಳಿಗೊಮ್ಮೆ ಈ ಮಂಡಳಿಯು ಸಭೆ ನಡೆಸುತ್ತದೆ. ಸದರಿ ಸಭೆಯಲ್ಲಿ ಈ ಕೆಳಕಂಡ ಅಂಶಗಳ ಕುರಿತು ಪರಿಶೀಲಿಸಲಾಗುತ್ತದೆ. • ಚೈಲ್ಡ್ ಲೈನ್ 1098 ಸೇವೆಯು ದಿನದ 24 ಗಂಟೆಗಳ ತುರ್ತು ಉಚಿತ ಸೇವೆಯಾಗಿರುತ್ತದೆ. • ಜಿಲ್ಲೆಯಲ್ಲಿ ಚೈಲ್ಡ್ ಲೈನ್ 1098ರ ಕಾರ್ಯನಿರ್ವಹಣೆ ಕುರಿತು. • ಮಕ್ಕಳ ಹಕ್ಕುಗಳ ಉಲ್ಲಂಘನೆ ಕುರಿತು ದಾಖಲಾದ ದೂರುಗಳ ವಿಮರ್ಶೆ. • ಇತರೆ ಇಲಾಖೆಗಳ ಸಹಕಾರ ಮತ್ತು ಅವರುಗಳ ಜವಾಬ್ದಾರಿಗಳ ನಿರ್ವಹಣೆ ಬಗ್ಗೆ. • ಚೈಲ್ಡ್ ಲೈನ್ 1098ರ ತಂಡ ಜಿಲ್ಲೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸಮಾಲೋಚನೆ ನಡೆಸಿ, ಸೂಕ್ತ ಸಲಹೆ ಸೂಚನೆ ಮತ್ತು ಮಾರ್ಗದರ್ಶನಗಳನ್ನು ನೀಡುವುದು ಈ ಮಂಡಳಿಯ ಮುಖ್ಯ ಉದ್ದೇಶವಾಗಿರುತ್ತದೆ.

4.	ಚೈಲ್ಡ್ ಲೈನ್ 1098 ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾರ್ಯಕ್ಕೂ ಇರುವ ಸಂಬಂಧಗಳೇನು? (ವಿವರ ನೀಡುವುದು)	ಚೈಲ್ಡ್ ಲೈನ್ 1098 ಕೇಂದ್ರ ಸರ್ಕಾರದ ಪ್ರಾಯೋಜಕತ್ವದಲ್ಲಿ ಚೈಲ್ಡ್‌ಲೈನ್ ಇಂಡಿಯಾ ಫೌಂಡೇಷನ್ ಎಂಬ ಸ್ವಯಂ ಸೇವಾ ಸಂಸ್ಥೆಯ ಮುಖಾಂತರ ಜಾರಿಗೊಂಡಿರುವ ಒಂದು ಯೋಜನೆಯಾಗಿದ್ದು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಹಯೋಗದೊಂದಿಗೆ ಈ ಕೆಳಕಂಡಂತೆ ಕಾರ್ಯ ನಿರ್ವಹಿಸುತ್ತಿದೆ. • ಬಾಲ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015 ರ ಕಲಂ 2 ಉಪಕಲಂ 25 ರಂತೆ ತುರ್ತು ಅಥವಾ ತೊಂದರೆಯಲ್ಲಿರುವ ಮಕ್ಕಳನ್ನು, ತುರ್ತು ಸೇವೆ ಅಥವಾ ಧೀರ್ಘಾವಧಿ ಪೋಷಣೆ, ರಕ್ಷಣೆ ಮತ್ತು ಪುನರ್ವಸತಿಗಾಗಿ ಕಾರ್ಯನಿರ್ವಹಿಸುವ ಹಾಗೂ ದಿನದ 24 ಗಂಟೆಯು ಜಾಗ್ರತವಾಗಿರವ ಸೇವೆ ಒದಗಿಸುವುದು. • ತುರ್ತು ರಕ್ಷಣೆ ಹಾಗು ಪೋಷಣೆಗೆ ಸಂಬಂಧಿಸಿದಂತೆ ಚೈಲ್ಡ್ ಲೈನ್ 1098 ಗೆ ನಿರಂತರ ಸಹಕಾರ ಹಾಗು 1098 ಬಗ್ಗೆ ಜಿಲ್ಲಾ ಮಟ್ಟದಲ್ಲಿ ಅರಿವು ಮೂಡಿಸುವುದು. • ಸಂಕಷ್ಟದಲ್ಲಿರುವ ಮಕ್ಕಳಿಗೆ ಮಕ್ಕಳ ಸಹಾಯವಾಣಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಜಂಟಿಯಾಗಿ ಕಾರ್ಯನಿರ್ವಹಿಸುವ ಮೂಲಕ ಮಕ್ಕಳನ್ನು ರಕ್ಷಿಸಿ ಪುನರ್ವಸತಿ ನೀಡುವುದು. • ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ಚೈಲ್ಡ್‌ಲೈನ್ ಸಭೆಯನ್ನು ಆಯೋಜಿಸುವುದು. ವ್ಯಾಪಕ ಪ್ರಚಾರದ ನಿಟ್ಟಿನಲ್ಲಿ ಜಾಗೃತಿ ಕಾರ್ಯಗಾರ, ತರಬೇತಿ ಮತ್ತು ಸಮಾಲೋಚನಾ ಸಭೆಗಳ ಆಯೋಜನೆಗೆ ಸಹಕಾರ ಮತ್ತು ಸಹಭಾಗಿತ್ವ ಒದಗಿಸುವುದರ ಮೂಲಕ ಮಕ್ಕಳ ಸಹಾಯವಾಣಿಯು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲು ಸಹಕರಿಸುವುದು.

ಸಂ:ಮಮಇ 35 ಮಭಾಬ 2019

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 179ಕ್ಕೆ ಅನುಬಂಧ

ರಾಜ್ಯದ ಚೈಲ್ಡ್ ಲೈನ್ 1098 ಸೇವೆ ಜಾರಿಯಲ್ಲಿರುವ ಜಿಲ್ಲೆಗಳ ಪಟ್ಟಿ

ಕ್ರಸಂ	ಚೈಲ್ಡ್ ಲೈನ್ ಸೇವೆ ಜಾರಿಯಲ್ಲಿರುವ ಜಿಲ್ಲೆಗಳು
1	ಬಾಗಲಕೋಟೆ
2	ಬೆಂಗಳೂರು ನಗರ
3	ಬೆಂ. ಗ್ರಾಮಾಂತರ
4	ಬೆಳಗಾಂ
5	ಬಳ್ಳಾರಿ
6	ಬೀದರ್
7	ಬಿಜಾಪುರ
8	ಚಾಮರಾಜನಗರ
9	ಚಿಕ್ಕಬಳ್ಳಾಪುರ
10	ಚಿಕ್ಕಮಗಳೂರು
11	ಚಿತ್ರದುರ್ಗ
12	ದಕ್ಷಿಣ ಕನ್ನಡ
13	ದಾವಣಗೆರೆ
14	ಧಾರವಾಡ
15	ಗದಗ್
16	ಕಲಬುರ್ಗಿ
17	ಹಾಸನ
18	ಹಾವೇರಿ
19	ಕೊಡಗು
20	ಕೊಪ್ಪಳ
21	ಮಂಡ್ಯ
22	ಮೈಸೂರು
23	ರಾಯಚೂರು
24	ರಾಮನಗರ
25	ಶಿವಮೊಗ್ಗ
26	ತುಮಕೂರು
27	ಉಡುಪಿ
28	ಉತ್ತರ ಕನ್ನಡ
29	ಯಾದಗಿರಿ